14. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ: ''ವಿಧಾನಪರಿಷತ್ತಿನಿಂದ ಅಂಗೀಕೃತವಾದ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1998.

2. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೆಯಕ 1998.

3. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1998.

15. ಪ್ರಕಟಣೆ

ಉಪಾಧ್ಯಕ್ಷರು: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ

(ಅ) ಈ ಕೆಳಕಂಡ ಸಂದೇಶವು·ಬಂದಿರುತ್ತದೆ.

''ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 103ರ ಮೇರೆಗೆ ದಿನಾಂಕ 11ನೇ ನವೆಂಬರ್, 1998ರಂದು, ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತು'' ಸದರಿ ವಿಧೇಯಕಗಳಿಗೆ ವಿಧಾನ ಸಭೆಯು ಸಹಮತಿಯನ್ನು ನೀಡಬೇಕೆಂದು ಕೋರುತ್ತೇನೆ.''

1) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1998.

2) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998.

(ಆ) ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

'' ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 103ರ ಮೇರೆಗೆ ದಿನಾಂಕ 11ನೇ ನವೆಂಬರ್, 1998 ರಂದು ಕರ್ನಾಟಕ ವಿಧಾನ ಪರಿಷತ್ತು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1998ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತು. ಆದ್ದರಿಂದ ಸದರಿ ವಿಧೇಯಕಕ್ಕೆ ವಿಧಾನ ಸಭೆಯ